MAY 30, 2026

AKASHAVANI - DHARWAD

PRADESH SAMACHARA (KANNADA) 12.00 P.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ಸ್ವಚ್ಛ ಭಾರತ ಮಿಷನ್, 'ಸ್ವಚ್ಛತೆಯೇ ಸೇವೆ' ಅಭಿಯಾನದಡಿ, ಬಳ್ಳಾರಿ ಮಹಾನಗರ ಪಾಲಿಕೆ, ಸ್ಯಾನಿಟರಿ ತ್ಯಾಜ್ಯ ಬಳಸಿ, ಗೊಬ್ಬರ ಉತ್ಪಾದಿಸಿ, ಕಸದಿಂದ ಗಿಡ ಎಂಬ, ಪರಿಸರಸ್ನೇಹಿ, ಅನುಕರಣೀಯ ಯೋಗ್ಯ ಮಾದರಿ, ಸೃಷ್ಟಿಸಿದೆ. ಬಳ್ಳಾರಿ ಮಹಾನಗರ ಪಾಲಿಕೆಯ, 13ನೇ ವಾರ್ಡ್‌ನ, ಸ್ವಚ್ಛತಾ ಪರಿವೀಕ್ಷಕ, ಜಗನ್ನಾಥ ರೆಡ್ಡಿ, ತ್ಯಾಜ್ಯ ವಸ್ತುಗಳನ್ನು, ಹೂ ಕುಂಡಗಳನ್ನಾಗಿ ಪರಿವರ್ತಿಸಿ, ಸಸಿ ನೆಟ್ಟು ಬೆಳೆಸುತ್ತಿದ್ದಾರೆ. ಜಗನ್ನಾಥ ರೆಡ್ಡಿ, ಪ್ರದೇಶ ಸಮಾಚಾರಕ್ಕಾಗಿ, ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

ಜಗನ್ನಾಥರೆಡ್ಡಿ ಧ್ವನಿ 19 ಸೆಕೆಂದುಗಳು

<><><>

ಬಳ್ಳಾರಿ ಮಹಾನಗರ ಪಾಲಿಕೆ, 13ನೇ ವಾರ್ಡ್ ನಿವಾಸಿ, ಕೃಷ್ಣವೇಣಿ, ಪಾಲಿಕೆಯಿಂದ, ವೈಜ್ಞಾನಿಕ ಕಸ ನಿರ್ವಹಣೆ ಬಗ್ಗೆ, ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದು ಹೀಗೆ..

<><><>

ಕೃಷ್ಣವೇಣಿ ಧ್ವನಿ 15 ಸೆಕೆಂದುಗಳು

<><><>

ವಿಶ್ವ ಋತುಚಕ್ರ ನೈರ್ಮಲ್ಯ ದಿನಾಚರಣೆ ಅಂಗವಾಗಿ, ಕೊಪ್ಪಳ ತಾಲೂಕು, ಕಲ್ಲ ತಾವರಗೇರಾ ಗ್ರಾಮ ಪಂಚಾಯಿತಿ ವ್ಯಾಪ್ತಿಯ, ಕೆಂಚನ ಡೋಣಿ ತಾಂಡಾದ, ಡಿ ಹೊಸಳ್ಳಿಯಲ್ಲಿ, ಮಹಾತ್ಮ ಗಾಂಧಿ, ನರೇಗಾ ಯೋಜನೆಯಡಿ, ಕೆರೆ ಹೂಳೆತ್ತುವ ಕಾಮಗಾರಿ ಸ್ಥಳದಲ್ಲಿ, ಕೂಲಿ ಕಾರ್ಮಿಕ ಮಹಿಳೆಯರಿಗೆ, ಋತುಚಕ್ರ ನೈರ್ಮಲ್ಯದ ಕುರಿತು, ಕೊಪ್ಪಳ ಜಿಲ್ಲಾ ಪಂಚಾಯಿತಿ, ಸ್ವಚ್ಛ ಭಾರತ ಮಿ ’ನ್ ಯೋಜನೆಯ, ನೈರ್ಮಲ್ಯ ಹಾಗೂ ಶುಚಿತ್ವ ಸಮಾಲೋಚಕಿ, ಬಸಮ್ಮ ಹುಡೇದ ಮಾಹಿತಿ ನೀಡಿದರು.

<><><>

"ಆಲೂಗಡ್ಡೆ ಎಲ್ಲಿ ಬೆಳೆಯುತ್ತದೋ, ಅಲ್ಲಿ, ಜೀವನೋಪಾಯ ಅಭಿವೃದ್ಧಿ ಹೊಂದುತ್ತದೆ" ಎಂಬ, ಧ್ಯೇಯದೊಂದಿಗೆ, ಇಂದು, ಅಂತಾರಾಷ್ಟ್ರೀಯ ಆಲೂಗಡ್ಡೆ ದಿನ ಆಚರಿಸಲಾಗುತ್ತಿದೆ. ವಿಶ್ವಸಂಸ್ಥೆಯ, ಆಹಾರ ಮತ್ತು ಕೃಷಿ ಸಂಸ್ಥೆ ನೇತೃತ್ವದಲ್ಲಿ, ಆಲೂಗಡ್ಡೆ ಕೃಷಿ ಮತ್ತು ಮೌಲ್ಯ ಸರಪಳಿ, ಸುಸ್ಥಿರ ಆದಾಯ ಹಾಗೂ ಗ್ರಾಮೀಣ ಆರ್ಥಿಕತೆಯನ್ನು ಬಲಪಡಿಸುವ ಬಗ್ಗೆ, ಚಿಂತನ ಮಂಥನ ನಡೆಯಲಿದೆ.

<><><>

ಉಪ ಲೋಕಾಯುಕ್ತ, ನ್ಯಾಯಮೂರ್ತಿ, ಕೆ.ಎನ್. ಫಣೀಂದ್ರ, ಯಾದಗಿರಿ ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ, 77 ದೂರುಗಳನ್ನು ಪರಿಶೀಲಿಸಿ, 57 ಪ್ರಕರಣಗಳನ್ನು, ಇತ್ಯರ್ಥಪಡಿಸಿದರು. ಸಾರ್ವಜನಿಕರ ಅಹವಾಲು ಆಲಿಕೆ, ಅಧಿಕಾರಿಗಳಿಗೆ ತಮ್ಮ ಜವಾಬ್ದಾರಿಯ ಅರಿವು ಮೂಡಿಸುತ್ತದೆ. ಸರ್ಕಾರಿ ಸಿಬ್ಬಂದಿ, ಗೌರವಯುತವಾಗಿ, ಸಾರ್ವಜನಿಕರಿಂದ ಬಂದ ದೂರುಗಳಿಗೆ, ಸಮಯೋಚಿತವಾಗಿ ಸ್ಪಂದಿಸುವುದು, ಕಡ್ಡಾಯ ಎಂದರು. ಇಂದು ಬೆಳಗ್ಗೆ, ಯಾದಗಿರಿಯ ಲುಂಬಿನಿ ವನಕ್ಕೆ ಭೇಟಿ ನೀಡಿ, ಪರಿಶೀಲಿಸಿದರು.

<><><>

ಗದಗ ಜಿಲ್ಲೆ, ಮತದಾರರ ಪಟ್ಟಿಯ, ಮ್ಯಾಪಿಂಗ್ ಕಾರ್ಯ ಶೀಘ್ರ ಪೂರ್ಣಗೊಳಿಸುವಂತೆ, ಅಪರ ಜಿಲ್ಲಾಧಿಕಾರಿ ಕೆ.ಆರ್. ದುರಗೇಶ, ಸೂಚಿಸಿದ್ದಾರೆ. ಜಿಲ್ಲಾಡಳಿತ ಭವನದಲ್ಲಿ, ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ–2026, ಮ್ಯಾಪಿಂಗ್ ಪ್ರಗತಿ ಪರಿಶೀಲನಾ ಸಭೆಯಲ್ಲಿ, ಅವರು ಮಾತನಾಡಿದರು.

<><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ, ಮಹತ್ವಾಕಾಂಕ್ಷೆಯ, ಸಂಸದರ ಕ್ರೀಡಾ ಹಾಗೂ ಸಾಂಸ್ಕೃತಿಕ ಮಹೋತ್ಸವದ ಭಾಗವಾಗಿ, ಧಾರವಾಡ ಲೋಕಸಭಾ ಕ್ಷೇತ್ರದ ಸಂಸದ ಹಾಗೂ ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಧಾರವಾಡದ ಸತ್ತೂರಿನ, ಶ್ರೀ ಡಿ. ವೀರೇಂದ್ರ ಹೆಗ್ಗಡೆ ಕಲಾಕ್ಷೇತ್ರದಲ್ಲಿ, ಇಂದು ರಾಷ್ಟ್ರೀಯ ಸಂಗೀತೋತ್ಸವ – 'ವಸಂತ ಗಾನ ಲಹರಿ' ಆಯೋಜಿಸಿದ್ದಾರೆ. ಅಪರಾಹ್ನ, 4.30ಕ್ಕೆ, ಹಿಂದೂಸ್ಥಾನಿ ಗಾಯಕ, ಪಂಡಿತ ಜಯತೀರ್ಥ ಮೇವುಂಡಿ ಹಾಗೂ ಬಾನ್ಸುರಿ ವಾದಕ, ಪಂಡಿತ ಪ್ರವೀಣ ಗೋಡಖಿಂಡಿ, ಜುಗಲ್ ಬಂದಿ, ಬಳಿಕ ಸಂಜೆ 7 ಗಂಟೆಗೆ, ಹಿಂದೂಸ್ಥಾನಿ ಗಾಯಕಿ, ವಿದುಷಿ ಕೌಶಿಕಿ ಚಕ್ರವರ್ತಿ, ತಮ್ಮ ಗಾಯನ ಪ್ರಸ್ತುತ ಪಡಿಸಲಿದ್ದಾರೆ.

<><><>

ನಾಡಿದ್ದು, ಜೂನ್ 1 ರಿಂದ, ಬೆಂಗಳೂರಿನ ಯಶವಂತಪುರದಿಂದ, ವಿಜಯಪುರ ನಡುವೆ, ಹೊಸ ದ್ವಿ ಸಾಪ್ತಾಹಿಕ ಎಕ್ಸ್‌ಪ್ರೆಸ್ ರೈಲು ಕಾರ್ಯಾರಂಭಿಸಲಿದೆ. ಕೇಂದ್ರ ಗ್ರಾಹಕ ವ್ಯವಹಾರಗಳ ಖಾತೆ ಸಚಿವ, ಪ್ರಲ್ಹಾದ ಜೋಶಿ, ಎಕ್ಸ್ ಮಾಧ್ಯಮದಲ್ಲಿ ಈ ವಿಷಯ ತಿಳಿಸಿದ್ದಾರೆ. ವಿಶೇ ಹೈಸ್ಪೀಡ್ ರೈಲು, ಶನಿವಾರ ಮತ್ತು ಸೋಮವಾರ, ಯಶವಂತಪುರದಿಂದ ವಿಜಯಪುರಕ್ಕೆ, ಪ್ರತಿ ಭಾನುವಾರ ಹಾಗೂ ಮಂಗಳವಾರ, ವಿಜಯಪುರದಿಂದ – ಯಶವಂತಪುರ ನಡುವೆ ಸಂಚರಿಸಲಿದೆ.

<><><>

ನಾಳೆ, ಮೇ 31, ವಿಶ್ವ ತಂಬಾಕು ರಹಿತ ದಿನ. "ಆಕ ಣೆಯನ್ನು ಬಹಿರಂಗ ಪಡಿಸುವುದು; ನಿಕೋಟಿನ್ ಮತ್ತು ತಂಬಾಕು ವ್ಯಸನವನ್ನು ಎದುರಿಸುವುದು" ಎಂಬ, ಧ್ಯೇಯದೊಂದಿಗೆ, ಆಚರಿಸಲಾಗುತ್ತಿದೆ. ಗದಗ ಜಿಲ್ಲಾಧಿಕಾರಿ, ಸಿ.ಎನ್. ಶ್ರೀಧರ ಅಧ್ಯಕ್ಷತೆಯಲ್ಲಿ, ಜಿಲ್ಲಾ ತಂಬಾಕು ನಿ ೀಧ ಕೋಶದ, ಸಮನ್ವಯ ಸಮಿತಿಯ ಸಭೆ, ಜರುಗಿತು.

ಗದಗ ಜಿಲ್ಲೆಯಲ್ಲಿ, ನಾಳೆ 31 ರಿಂದ ಜೂನ್ 30ರ ವರೆಗೆ, ತಂಬಾಕು ಮತ್ತು ನಿಕೋಟಿನ್ ಉತ್ಪನ್ನಗಳ ಸೇವನೆಯ ದು ್ಪರಿಣಾಮದ ಬಗ್ಗೆ, ಜನಜಾಗೃತಿ ಕಾರ್ಯಕ್ರಮಗಳು, ಜರುಗಲಿವೆ ಎಂದರು. ಜಿಲ್ಲಾ ಆರೋಗ್ಯಾಧಿಕಾರಿ ಡಾಕ್ಟರ್ ಎಸ್. ಎಸ್.ನೀಲಗುಂದ ಉಪಸ್ಥಿತರಿದ್ದರು.

<><><>

ಪಲ್ಸ್ ಪೋಲಿಯೊ, ರಾಷ್ಟ್ರೀಯ ಅಭಿಯಾನ, ರಾಜ್ಯಾದ್ಯಂತ ಆಯೋಜಿತವಾಗಿದ್ದು, ಬಾಗಲಕೋಟೆ ಜಿಲ್ಲೆಯಲ್ಲಿ, ಜೂನ್ 28 ರಿಂದ ಜುಲೈ 1ರ ವರೆಗೆ, ನಾಲ್ಕು ದಿನಗಳ ಕಾಲ ನಡೆಯಲಿದೆ. ಐದು ವ ದೊಳಗಿನ, 2 ಲಕ್ಷ 3 ಸಾವಿರದ 443 ಮಕ್ಕಳಿಗೆ, ಪೋಲಿಯೊ ಲಸಿಕೆ ಹಾಕುವ ಗುರಿ ಹೊಂದಲಾಗಿದೆ ಎಂದು, ಜಿಲ್ಲಾಧಿಕಾರಿ ಸಂಗಪ್ಪ ತಿಳಿಸಿದ್ದಾರೆ.

<><><>

ದಕ್ಷಿಣಕನ್ನಡ ಜಿಲ್ಲೆ, ಮಂಗಳೂರಿನ, ತಣ್ಣೀರುಬಾವಿಯ ಬ್ಲೂ ಬೇ ಇಕೋ ಬೀಚ್‌ನಲ್ಲಿ, ಆರಂಭಗೊಂಡ, ಎರಡು ದಿನಗಳ, *ಇಂಡಿಯನ್ ಓಪನ್ ಆಫ್ ಸರ್ಫಿಂಗ್ ಚಾಂಪಿಯನ್‌ಶಿಪ್‌ನ ಮೊದಲ ದಿನ*, ತಮಿಳುನಾಡಿನ, ಮಹಾಬಲಿಪುರಂನ ಕಮಲಿ ಮೂರ್ತಿ, ಮಹಿಳೆಯರ ವಿಭಾಗದಲ್ಲಿ, ಫೈನಲ್ ಹಂತ ಪ್ರವೇಶಿಸಿದ್ದಾರೆ.

<><><>

ಆಕಾಶವಾಣಿಯ, ಬಹುಶ್ರುತ, 'ಮನ್ ಕಿ ಬಾತ್'ನ 134ನೇ ಆವೃತ್ತಿ, ನಾಳೆ 31 ರಂದು, ಭಾನುವಾರ ಬೆಳಗ್ಗೆ 11 ಗಂಟೆಗೆ, ಪ್ರಸಾರವಾಗಲಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ, ತಮ್ಮ ಮನದ ಮಾತುಗಳನ್ನಾಡಲಿದ್ದಾರೆ. 11.30ರ ಬಳಿಕ, ಕನ್ನಡ ಸೇರಿದಂತೆ, ಎಲ್ಲ ಪ್ರಾದೇಶಿಕ ಭಾಷೆಗಳಲ್ಲೂ, ಮನದ ಮಾತು ಬಿತ್ತರಗೊಳ್ಳಲಿದೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.